ಎನ್.ಆರ್. ತಿಪ್ಪೇಸ್ವಾಮಿ ಕವಿತೆ ಮತ್ತು ಕಥೆಗಳ ಬರವಣಿಗೆಯನ್ನು ಇಷ್ಟಪಡುವವರು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ವಾಸ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯ ಹಂಪಿ ಯಲ್ಲಿ ಬಾಹ್ಯವಾಗಿ ಪಿಹೆಚ್ ಡಿ ಸಂಶೋಧನಾ ಅಧ್ಯಯನ ಮಾಡುತ್ತಿದ್ದಾರೆ.

ಸರ್ಕಾರದಿಂದ ಯಾವುದೇ ಪರಿಹಾರವೂ ದೊರೆಯಲಿಲ್ಲ.

ಕೂಲಿಯಿಂದ ಸಂಜೆ ಹಿಂದಿರುಗಿದ ದ್ಯಾವಕ್ಕನ ತಲೆಯೊಳಗೆ ನಾಳೆ ಶನಿವಾರ ಎಂಬುದು ನೆನಪಿಗೆ ಬಂತು. ವಾರದ ದಿನ ನೆಲವನ್ನು ಸಗಣಿಯಿಂದ ಸಾರಿಸಬೇಕು. ಸಗಣಿ ತಂದು ನೆಲ ಸಾರಿಸುವಾಗ ತಲೆಯೊಳಗೆ 'ಹೊಸ ಮನೆ ಕಟ್ಟದರೆ ನೆಲಕ್ಕೆ ಕಡಪಾ ಬಂಡೆ ಹಾಕಿಸಬೇಕು, ಆಗ ಈ ರೀತಿ ಸಗಣಿಯಿಂದ ಸಾರುಸುವುದು ತಪ್ಪುತ್ತದೆ. ಮನೆ ನೀಟಾಗಿರುತ್ತದೆ' ಎಂದು ಯೋಚಿಸುತ್ತಾ, ಸಗಣಿ ನೆಲ ಅಲ್ಲಲ್ಲಿ ಎದ್ದಿರುವುದನ್ನು ಮಣ್ಣಿನಿಂದ ಮುಚ್ಚುತ್ತಾ, ಕಾಳಿನ ಚೀಲಗಳನ್ನಿಟ್ಟ ಮೂಲೆಯಲ್ಲಿ ಇಲಿ, ಹೆಗ್ಗಣಗಳೂ ತೋಡಿದ ಬಿಲದ ಮಣ್ಣಿನ ರಾಶಿ ಕಂಡು ಅವಕ್ಕೆ ಶಪಿಸುತ್ತಾ, ತೋಡಿರುವ ಬಿಲಕ್ಕೆ ಗಾಜಿನ ಚೂರುಗಳು, ಬಳೆ ಚೂರುಗಳು, ಸಣ್ಣ ಸಣ್ಣ ಕಲ್ಲುಗಳಿಂದ ತುಂಬಿ ಮಣ್ಣು ನೀರು ಕಲಿಸಿ ಬುರುಜೆ ಮಾಡಿ ತಟ್ಟಿದಳು. ತನ್ನ ಮನೆಯ ಈ ಅವಸ್ಥೆಗೆ ಎಲ್ಲರನ್ನೂ ಮುಖ್ಯವಾಗಿ ತನ್ನ ಗಂಡ ಹಾಗೂ ಸರ್ಕಾರವನ್ನು ಬೈದುಕೊಳ್ಳುತ್ತಾ ನೆಲ ಸಾರಿಸುತ್ತಿದ್ದಳು.

ಅದೊಂದು ದಿನ ಸಂಜೆ ದ್ಯಾವಕ್ಕ ಪಡಿತರಚೀಟಿಯಿಂದ ತಂದ ಅಕ್ಕಿಯನ್ನು ಹಸನು ಮಾಡುತ್ತಾ ಕುಳಿತಿದ್ದಳು. ಊರಲ್ಲಿ ತಮಟೆ ಬಡಿಯುವ ಸದ್ದು ಕೇಳಿಸಿತು. ದ್ಯಾವಕ್ಕನ ಕಿವಿ ಚುರುಕಾದವು. ತಕ್ಷಣ ತಮಟೆ ಶಬ್ದ ಬಂದ ದಿಕ್ಕಿನತ್ತ ಕಿವಿ ಕೊಟ್ಟಳು. ತಮಟೆ ಬಡಿಯುವ ಮಾರಣ್ಣ ಹೇಳೋದು ಸರಿಯಾಗಿ ಕೇಳಿಸುತ್ತಿರಲಿಲ್ಲ. ಅಕ್ಕಿ ಹಸನು ಮಾಡುವುದನ್ನು ಅಷ್ಟಕ್ಕೇ ಬಿಟ್ಟು ದಡಬಡಾಯಿಸಿ ಎದ್ದು ಬಂದು ಓಣಿಯಲ್ಲಿ ನಿಂತಳು. ಅವಳ ಜೊತೆ ಅಕ್ಕಪಕ್ಕದವರು ಹೊರಬಂದು ನಿಂತು ನೋಡಲಾರಂಭಿಸಿದರು. ಹಟ್ಟಿಯ ಹುಡುಗರು ತಮಟೆ ಸದ್ದಿಗೆ ಜೋರಾಗಿ ಗಲಾಟೆ ಎಬ್ಬಿಸಿದ್ದರಿಂದ ಮಾರಣ್ಣ ಏನು ಹೇಳುತ್ತಿದ್ದಾನೆ ಎನ್ನುವುದು ದ್ಯಾವಕ್ಕನಿಗೆ ಕೇಳಿಸಲಿಲ್ಲ. ಅಲ್ಲಿದ್ದ ಹುಡುಗರನ್ನು ಗದರಿಸಿ 'ಏ... ಹುಡುಗರಾ, ಡಂಗೂರ ಏನಕ್ಕೆ ಹೊಡಿತಾರೆ ತಿಳ್ಕೋಂಡು ಬರ್ರಿ ಹೋಗ್ರಲೇ' ಎಂದು ಕಳುಹಿಸಿದಳು. ಹುಡುಗರು ಕೇಕೆ ಹಾಕುತ್ತಾ ಇನ್ನಷ್ಟು ಗಲಾಟೆ ಮಾಡಿ ಅವನು ಹೇಳ್ತಾಯಿರೋದು ಯಾರಿಗೂ ಕೇಳಿಸದಂತೆ ಕೂಗಾಡಲು ಶುರುಮಾಡಿದರು. ಮಾರಣ್ಣ ವಾಡಿಕೆಯಂತೆ ಆ ಓಣಿಯ ತುದಿಯಲ್ಲಿ ನಿಂತು ಕೂಗಿ ಹೇಳಲಾರಂಬಿಸಿದ. ಅವನು ಹೇಳುವುದು ದ್ಯಾವಕ್ಕನ ಕಿವಿಗೇನು, ಅಲ್ಲಿದ್ದವರಾರಿಗೂ ಕೇಳಿಸುತ್ತಿರಲಿಲ್ಲ. ದ್ಯಾವಕ್ಕ ಅವನು ಏನು ಹೇಳ್ತಾನೋ ಎಂದು ಅವನೆಡೆಗೆ ದೌಡಾಯಿಸಿ ಬಂದು 'ಏನು ಮಾರಣ್ಣ ಏನು ಅದು ವಿಷಯ, ಸರಿಯಾಗಿ ಹೇಳಬಾರದೇನು?' ಎಂದಳು. ಮಾರಣ್ಣ ಹೇಳಿದ ವಿಷಯ ದ್ಯಾವಕ್ಕ ನಿರೀಕ್ಷಿಸಿದ್ದ ಗೌರ್ಮೆಂಟ್ ಮನೆ ಕೊಡಲಿಕ್ಕೆ ಗ್ರಾಮಸಭೆ ಮಾಡುವುದಾಗಿರದೇ, ಊರಿನಲ್ಲಿ ಬರಗಾಲ ಇದ್ದುದರಿಂದ ಬಸಣ್ಣ ಗುಡಿಯ ಐನೋರು ಹೇಳಿದಂತೆ, ಸೋಮವಾರ ಸಂಜೆ ಊರಿನ ಬುಡ್ಡೇಕಲ್ಲಿಗೆ ನೂರಾ ಒಂದು ಕೊಡ ನೀರು ಸುರಿದು, ಬಸಣ್ಣ ದೇವರಿಗೆ ಎಲೆ ಪೂಜೆ ಮಾಡಿಸಬೇಕು. ಹೀಗೆ ಮಾಡಿಸಿದ ವಾರದಲ್ಲಿ ಮಳೆ ಬರುತ್ತದೆ ಎಂದು ರಾಮಪುರದ ಯಜಮಾನರು ತೀರ್ಮಾನಿಸಿದ್ದರಿಂದ ಈ ಸುದ್ದಿ ಊರಿನ ಓಣಿಗಳೆಲ್ಲಾ ತೂರಾಡಿ ಬಂದು ಈಗ ದ್ಯಾವಕ್ಕನ ಕಿವಿವರೆಗೂ ಬಂದಿತು. ದ್ಯಾವಕ್ಕ 'ಅಯ್ಯೋ ಇಷ್ಟೇನಾ! ನಾನೆಲ್ಲೋ ಗೌರ್ಮೆಂಟ್‌ನೋರು ಮನೆ ಕೊಡ್ತಾರೆ ಅಂಬಕಂಡಿದ್ದೆ' ಎಂದು ನಿರಾಸೆಯಿಂದ ಅಲ್ಲಿ ಕುಣಿಯುತ್ತಿದ್ದ ಹಡುಗರ ಗುಂಪನ್ನ ಗದರಿಸಿ, ಮೊರದಲ್ಲಿದ್ದ ಅಕ್ಕಿ ಹಸನು ಮಾಡಲು ಕುಳಿತಳು.

ಮರುದಿನ ಕೂಲಿ ಕೆಲಸಕ್ಕೆ ತೆರಳುವಾಗ ಎದುರಾದ ಚಿಕ್ಕಣ್ಣನನ್ನು 'ದಿನಾಲೂ ರಾಮಪುರದ ಪಂಚಾಯಿತಿಗೆ ಓಡಾಡ್ತೀಯಾ. ಗೌರ್ಮೆಂಟ್ ಮನೆ ಸರ್ಕಾರದಿಂದ ಯಾವಾಗ ಬಂದಾವು ಕೇಳಣ್ಣೊ' ಎಂದಳು. 'ಈ ಸಾರಿ ಬರಗಾಲ ಬಂದದೆ. ಸರ್ಕಾರದಲ್ಲಿ ದುಡ್ಡಿಲ್ಲ ಅಂತಾರೆ. ಬರೋದು ಡೌಟು ಐತೆ ಕಣವ್ವೋ' ಎಂದ.